## ಕಥೆ



ಮೂಲ: **ವರ್ಜೀನಿಯಾ ವುಲ್ಫ್**

ಕನ್ನಡಕ್ಕೆ: **ಪ್ರಕಾಶ್ ನಾಯಕ್**

ಕಲೆ: ವಿಶ್ವನಾಥ್ ಎ.ಎಸ್.



ದಿನದ ಯಾವ ಹೊತ್ತಿನಲ್ಲಿ ನೀವು ಎದ್ದರೂ ಅಲ್ಲೊಂದು ಬಾಗಿಲು ಬಡಿದುಕೊಳ್ಳುತ್ತಿತ್ತು. ಕೈಕೈ ಹಿಡಿದುಕೊಂಡು ಅವರು, ಇಲ್ಲಿಂದ ಎದ್ದು, ಮತ್ತಲ್ಲಿ ಪ್ರತ್ಯಕ್ಷವಾಗಿ ತಾವು ಜೋಡಿ ದೆವ್ವಗಳೆನ್ನುವುದನ್ನು ಖಾತ್ರಿ ಪಡಿಸಿಕೊಳ್ಳುವ ಹಾಗೆ ಕೋಣೆಯಿಂದ ಕೋಣೆಗೆ ಅಲೆಯುತ್ತಿದ್ದರು.

'ನಾವದನ್ನು ಇಲ್ಲಿಯೇ ಬಿಟ್ಟದ್ದೆವು' ಎಂದವಳು ಹೇಳಿದರೆ, ಅವನು 'ಓಹ್, ಆದರೆ ಇಲ್ಲಿಯೂ!' ಎಂದು ಸೇರಿಸುತ್ತಿದ್ದ. 'ಅದು ಅಟ್ಟದ ಮೇಲಿದೆ' ಎಂದವಳು ಗುನುಗಿದರೆ, 'ಕೈತೋಟದಲ್ಲಿಯೂ' ಎಂದವನು ಪಿಸುಗುಟ್ಟ, 'ಶ್! ಸದ್ದು ಮಾಡಬಾರದು, ಇಲ್ಲದಿದ್ದರೆ ನಾವು ಅವರನ್ನು ಎಬ್ಬಿಸುತ್ತೇವೆ' ಎಂದು ತಮ್ಮತಮ್ಮಲ್ಲಿಯೇ ಮಾತಾಡಿಕೊಳ್ಳುತ್ತಿದ್ದರು.

ಹಾಗಂತ ಅವರು ನಮ್ಮನ್ನು ಎಬ್ಬಿಸಿಬಿಟ್ಟರು ಅಂತಲ್ಲ; ಊಹೂಂ! 'ಅವರು ಏನನ್ನೋ ಹುಡುಕುತ್ತಿದ್ದರು; ಆ ಹುಡುಕಾಟಕ್ಕೆ ಈಗ ಮುಕ್ತಾಯ ಹಾಡಿದರು' ಎಂದು ಹೇಳಿ, ನಂತರ ನಾವು ಒಂದೆರಡು ಪುಟ ಓದಬಹುದು. ಅಥವಾ 'ಈಗ ಅವರು ಅದನ್ನು ಕಂಡುಕೊಂಡರು' ಎಂದು ಖಚಿತವಾಗಿ ಹೇಳಿ, ಪೆನ್ಸಿಲನ್ನು ನಡುವಿಟ್ಟು ಮುಚ್ಚಿಡಲೂಬಹುದು. ಮತ್ತೆ ಓದಲು ಸುಸ್ತಾಗಿ ಅಲ್ಲಿಂದ ಎದ್ದು ಸ್ವತಃ ಹೋಗಿ ನೋಡಲೂಬಹುದು- ಬಣಗುಡುತ್ತಿರುವ ಮನೆ; ತೆರೆದ ಬಾಗಿಲುಗಳು; ಪಾರಿವಾಳಗಳಷ್ಟೆ ಸಂತೃಪ್ತಿಯಿಂದ ತೊನೆಯುತ್ತಿವೆ; ತೋಟದಿಂದ ಒಕ್ಕಣೆ ಯಂತ್ರದ ಗುನುಗುವಿಕೆ ಕೇಳಿ ಬರುತ್ತಿದೆ.

ಹಾಂ, ನಾನಿಲ್ಲಿಗೆ ಏಕೆ ಬಂದೆ? ಏನು ಹುಡುಕಲು ಬಯಸಿದ್ದೆ? ನನ್ನ ಕೈಗಳು ಖಾಲಿಯಾಗಿದ್ದವು. ಬಹುಶಃ ಅಟ್ಟದ ಮೇಲಿಟ್ಟಿರಬಹುದೆ? ಸೇಬುಗಳು ಅಟ್ಟದ ಮೇಲಿದ್ದವು. ಅಟ್ಟ ಹತ್ತಿ ಮತ್ತೆ ಕೆಳಗಿಳಿದೆ. ಕೈತೋಟ ಎಂದಿನಂತೆ ಸ್ತಬ್ಧವಾಗಿತ್ತು, ಆದರೆ ಪುಸ್ತಕ ಮಾತ್ರ ಜಾರಿ ಹುಲ್ಲಿನ ಮೇಲೆ ಬಿದ್ದುಕೊಂಡಿತ್ತು.

ಅವರದನ್ನು ಹಜಾರದಲ್ಲಿ ಕಂಡುಕೊಂಡಿರಬೇಕು. ಹಾಗಂತ ಅವರನ್ನು ನೇರವಾಗಿ ಕಾಣಬಹುದು ಅಂತಲ್ಲ. ಕಿಟಕಿಯ ಗಾಜುಗಳಲ್ಲಿ ಸೇಬುಗಳ ಪ್ರತಿಬಿಂಬ, ಗುಲಾಬಿ ಹೂಗಳ ಪ್ರತಿಬಿಂಬ; ಗಾಜಿನ ತುಂಬಾ ಎಲೆಗಳ ಹಸಿರು ಬಣ್ಣ. ಅವರು ಹಜಾರದಲ್ಲಿ ಚಲಿಸಿದಾಗಲೆಲ್ಲ ಸೇಬುವಿನ ಹಳದಿ ಬಣ್ಣ ಎದ್ದು ಕಾಣುತ್ತಿತ್ತು. ಆದರೆ, ಮರುಕ್ಷಣವೇ ಒಂದೊಮ್ಮೆ ಬಾಗಿಲು ತೆರೆದರೆ, ಬಾಗಿಲು ನೆಲದ ಮೇಲಿಂದ ಸರಿದು ಗೋಡೆಗೆ ಆತುಕೊಳ್ಳುವಾಗ ಛಾವಣಿಗೆ ತೂಗುಬಿದ್ದ ಪದಕವೊಂದು- ಅರೆ! ಇದೇನಿದು? ನನ್ನ ಕೈಗಳು ಮತ್ತೆ ಖಾಲಿಯಾಗಿದ್ದವು. ಅದೋ, ಹಾರುವ ಹಕ್ಕಿಯ ನೆರಳು ಜಮಖಾನದ ಮೇಲೆ ಹಾದುಹೋಯಿತು; ಆಳವಾದ ಮೌನದ ಬಾವಿಗಳಿಂದ ಅಲೆಅಲೆಯಾಗಿ ಪಾರಿವಾಳದ ಕೂಗು ಕೇಳಿಬರುತ್ತಿತ್ತು.

'ಸುರಕ್ಷಿತವಾಗಿದೆ, ಸುರಕ್ಷಿತವಾಗಿದೆ, ಸುರಕ್ಷಿತವಾಗಿದೆ' ಮನೆಯ ನಾಡಿಬಡಿತ ಮೆಲ್ಲಗೆ ಬಡಿದುಕೊಳ್ಳುತ್ತಿತ್ತು.

'ಅಡಗಿಸಿಟ್ಟ ನಿಧಿ; ಕೋಣೆಯ...'

ನಾಡಿಬಡಿತ ಸ್ವಲ್ಪಹೊತ್ತು ನಿಂತಿತು. ಓಹ್, ಅವರು ಹುಡುಕುತ್ತಿದ್ದುದು ಹುಗಿದಿಟ್ಟ ನಿಧಿಯನ್ನೇ?

ಸ್ವಲ್ಪಹೊತ್ತಿನ ನಂತರ ಬೆಳಕು ಮಸುಕಾಯಿತು. ಅಂದರೆ ಅವರೀಗ ತೋಟದಲ್ಲಿ! ಅಲ್ಲಿ ಮರಗಳು ಅಲೆಯುತ್ತಿದ್ದ ಕಿರಣಗಳನ್ನು ಮೇಲೆಯೇ ತಡೆಹಿಡಿದು ಕತ್ತಲೆಯನ್ನು ಕೆಳಗೆ ಕಳುಹಿಸುತ್ತಿದ್ದವು.